ಅಸಲು ದಾವಾ ನಂಃ 46/2022
ಪಿ ಡಬ್ಲ್ಯುಃ 1

<u>ದಿನಾಂಕಃ **16-11-2023** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>
<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎಸ್ ಎನ್ ವಕೀಲರಿಂದಃ</u>

ದಾವಾ ಬಿ ಸ್ವತ್ತಿನಲ್ಲಿ ಹಾಲಿ 4 ನೇ ಪ್ರತಿವಾದಿ ವಸಂತರವರು ವಾಸವಾಗಿದ್ದಾರೆ ಎಂದರೆ ಸರಿ . ವಸಂತರವರು ತಾಯಿಯೊಟ್ಟಿಗೆ ವಾಸವಾಗಿರಲು 15 ವರ್ಷಗಳಾಗಿದೆ ಎಂದರೆ ಸರಿಯಲ್ಲ, ಸಾಕ್ಷಿ ತಾಯಿ ಮೂಲ ಮನೆಯಲ್ಲಿ ಇದ್ದಾರೆ ಎಂದು ನುಡಿದಿರುತ್ತಾರೆ. ವಸಂತರವರು ಆ ಮನೆಯಲ್ಲಿ ನಿಖರವಾಗಿ ಎಷ್ಟು ವರ್ಷಗಳಿಂದ ವಾಸವಾಗಿದ್ದಾರೆ ಗೊತ್ತಿಲ್ಲ. ನನ್ನ ತಾಯಿ ಮೂಲ ಮನೆಯಲ್ಲಿ ವಾಸವಾಗಿದ್ದಾರೆ ಎಂದು ತೋರಿಸಲು ಆಧಾರ್ ಕಾರ್ಡ್ ಓಟರ್ ಐಡಿ , ರೇಷನ್ ಕಾರ್ಡ್ ಇವೆ. ಅವುಗಳನ್ನು ಮುಂದಿನ ದಿನಾಂಕಗಳಲ್ಲಿ ಹಾಜರುಪಡಿಸುತ್ತೇವೆ. ನನ್ನ ತಾಯಿ ಮೂಲ ಮನೆಯಲ್ಲಿ ವಾಸವಾಗಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ, ಕಾರಣ ನ್ಯಾಯಾಲಯಕ್ಕೆ ಯಾವುದೇ

ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೂಲ ಮನೆ ಅಲ್ಲದೇ ನಮ್ಮ ತಂದೆಗೆ ತೆಂಗಿನ ಮನೆಯಲ್ಲಿ ಕೆಲಸಗಾರರ ವಾಸಕ್ಕೆ 4 ನಿವೇಶನಗಳು ಇದ್ದವು ಎಂದರೆ ನೆನಪಿಲ್ಲ. 4 ನಿವೇಶನಗಳನ್ನು ನನ್ನ ತಂದೆ ಹೊಂದಿದ್ದರು ಎಂಬ ಬಗ್ಗೆ ಮಾಹಿತಿ ನೀಡಿದ ಬಗ್ಗೆ ನೆನಪಿಲ್ಲ. ಆ ಎಲ್ಲಾ ನಿವೇಶನಗಳು ತೆಂಗಿನಮನೆ ಮುಖ್ಯ ರಸ್ತೆಯಲ್ಲಿ ಇವೆ ಎಂದರೆ ನೆನಪಿಲ್ಲ. ಅದರಲ್ಲಿ ಈ ಹಿಂದೆ ಕೂಲಿ ಕಾರ್ಮಿಕರು ವಾಸವಾಗಿದ್ದರು ಎಂದರೆ ನೆನಪಿಲ್ಲ. ಅವು ತುಳುವಿನಕೊಪ್ಪ ಗ್ರಾಮ ಪಂಚಾಯಿತಿಗೆ ಬರುತ್ತವೆ ಎಂದರೆ ನೆನಪಿಲ್ಲ. ಒಂದು ನಿವೇಶನ ತೆಂಗಿನ ಮನೆಯಲ್ಲಿ ಇದೆ. ಅದು ಆನಂದ ರಾವ್ ಭಟ್ ಎಂಬುವವರು ಪೌತಿಯಾದ ನಂತರ ಶಕುಂತಲ ರವರ ಹೆಸರಿನಲ್ಲಿ ಇದೆ ಎಂದರೆ ನೆನಪಿಲ್ಲ. ಇನ್ನೊಂದು ತೆಂಗಿನಮನೆಯಲ್ಲಿ ಇರುವ ನಿವೇಶನ ನಮ್ಮ ತಾಯಿಯ ಹೆಸರಿನಲ್ಲಿ ಇದೆ ಎಂದರೆ ನೆನಪಿಲ್ಲ. ಇನ್ನೊಂದು ತೆಂಗಿನ ಮನೆಯಲ್ಲಿ ಆಳುಗಳ ಬಿಡಾರ ನಮ್ಮ ತಾಯಿಯ ಹೆಸರಿನಲ್ಲಿ ಇದೆ ಎಂದರೆ ನೆನಪಿಲ್ಲ. ಇನ್ನೊಂದು ನಿವೇಶನ ಕಲ್ಕೆರೆಯಲ್ಲಿ ನಮ್ಮ ತಂದೆಯ ಹೆಸರಿನಲ್ಲಿದ್ದು, ನಮ್ಮ ತಂದೆಯ ಮರಣದ ನಂತರ ತಾಯಿಯ ಹೆಸರಿನಲ್ಲಿ ಇದೆ ಎಂದರೆ ನೆನಪಿಲ್ಲ. ಸದರಿ ಎಲ್ಲಾ ನಿವೇಶನಗಳು 60*40 ವಿಸ್ತೀರ್ಣ ಹೊಂದಿವೆ ಎಂದರೆ ನೆನಪಿಲ್ಲ. ನಮ್ಮ ತಂದೆಗೆ ಎಲ್ಲೆಲ್ಲಿ ಆಸ್ತಿಗಳು ಇವೆ ಗೊತ್ತಿದೆ. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನನ್ನ ತಂದೆಗೆ ಬೇರೆ ಯಾವ ಆಸ್ತಿಗಳಿವೆ ನನ್ನ ದೊಡ್ಡಣ್ಣನಿಗೆ ಗೊತ್ತು . ದಾವಾ ಹಾಕುವ ಕಾಲಕ್ಕೆ ನಮ್ಮ ತಂದೆಗೆ ಎಲ್ಲೆಲ್ಲಿ ಆಸ್ತಿಗಳಿವೆ ಎಂದು ದೊಡ್ಡಣ್ಣನನ್ನು ಕೇಳಿರುತ್ತೇವೆ. ಈಗ ಮೇಲೆ ಹೇಳಿರುವ ಆಸ್ತಿಗಳ ಬಗ್ಗೆ ನಿಮ್ಮ ಅಣ್ಣ ಹೇಳಿದ್ದಾರೆಯೇ ಎಂದರೆ ಸಾಕ್ಷಿ ನಾವು ಕೇಳಿಲ್ಲ , ಅವರು ಹೇಳಿಲ್ಲ ಎಂದು ನುಡಿದಿರುತ್ತಾರೆ. ಈ ಮೇಲ್ಕಂಡ ನಾಲ್ಕೂ ಆಸ್ತಿಗಳು ಈಗ ಯಾರ ಹೆಸರಿನಲ್ಲಿವೆ ನಮ್ಮ ದೊಡ್ಡಣ್ಣನನ್ನು ಕೇಳಬೇಕು. ನಮ್ಮ ದೊಡ್ಡಣ್ಣನ ಮನೆಗೆ ಬರುವ ಆಳುಗಳು ಆ ಮನೆಯಲ್ಲಿ ವಾಸವಾಗಿದ್ದಾರಾ ಎಂದರೆ ಸಾಕ್ಷಿ ಈಗ ಯಾವ ಆಳುಗಳೂ ಬರುತ್ತಿಲ್ಲ, ಅದು ನಮ್ಮ ದೊಡ್ಡಣ್ಣನಿಗೆ ಗೊತ್ತು ಎಂದು ನುಡಿದಿರುತ್ತಾರೆ. ಹಿಂದೆ ಬರುತ್ತಿದ್ದ ಆಳುಗಳು ಈ ಮೇಲ್ಕಂಡ ಮನೆಗಳಲ್ಲಿ ವಾಸವಾಗಿರುತ್ತಿದ್ದರು ಎಂದರೆ ಸಾಕ್ಷಿ ನಮ್ಮ ದೊಡ್ಡಣ್ಣನನ್ನು ಕೇಳಬೇಕು ಎಂದು ನುಡಿದಿರುತ್ತಾರೆ. ನನ್ನ ದೊಡ್ಡಣ್ಣ ಶ್ರೀಧರ ರವರಿಗೆ ಎಲ್ಲಾ ಆಸ್ತಿಗಳ ಬಗ್ಗೆ ಗೊತ್ತು. ನಮ್ಮ ದೊಡ್ಡಣ್ಣ ಶ್ರೀಧರ ಕೊರ್ಟಿಗೆ ಬಂದು ಸಾಕ್ಷಿ ಹೇಳಬಹುದು ಎಂದರೆ ಸರಿ . ನನ್ನ ದೊಡ್ಡಣ್ಣ ಈ ಪ್ರಕರಣ ಚಾಲ್ತಿ ಆದಾಗಿನಿಂದಲೂ ಈವರೆಗೂ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ

ಸರಿಯಲ್ಲ. ನಾನು, ಪ್ರತಿವಾದಿ 1 ರಿಂದ 3, 5 ರಿಂದ 7 ನಮ್ಮ ತಂದೆಯ ಆಸ್ತಿಗಳು ಎಲ್ಲಿವೆ ತಿಳಿದುಕೊಂಡು ಮಾತನಾಡಿಕೊಂಡು ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿ . ನಾವು ದಾವೆ ಹಾಕುವ ಮುಂಚೆ ಪ್ರತಿವಾದಿ 1 ರಿಂದ 3 ಹಾಗೂ 5 ರಿಂದ 7 ರವರಿಗೆ ಗೊತ್ತಿತ್ತು ಎಂದರೆ ಸರಿ . ದಾವಾ ಹಾಕಿದರೆ ಯಾವ ರೀತ ಮಾಹಿತಿ ಕೊಡಬೇಕು ಎಂಬ ವಿಚಾರವನ್ನು ನಾವು ವಕೀಲರಿಗೆ ತಿಳಿಸಿದ್ದೇವೆ ಎಂದರೆ ಸರಿ . ದಾವಾ ಹಾಕುವ ಮೊದಲು ನಾನು ನಮ್ಮ ವಕೀಲರಿಗೆ ತಿಳಿಸಿದ್ದೇನೆ ಹಾಗೂ ಪ್ರತಿವಾದಿ 1 ರಿಂದ 3 ಹಾಗೂ 5 ರಿಂದ 7 ರವರ ವಕೀಲರಿಗೂ ಗೊತ್ತಿತ್ತು ಎಂದರೆ ಸರಿ.

ಮೇಲ್ಕಂಡ ನಿವೇಶನಗಳು ಚಿಕ್ಕಮಗಳೂರು ಕೊಪ್ಪ ಮುಖ್ಯ ರಸ್ತೆಯಲ್ಲಿರುವ ಆಸ್ತಿಗಳು ಎಂದರೆ ಸಾಕ್ಷಿ ನಮ್ಮ ಅಣ್ಣನನ್ನು ಕೇಳಬೇಕು ಎಂದು ನುಡಿದಿರುತ್ತಾರೆ. ಈ ಆಸ್ತಿಗಳನ್ನು ಯಾವ ಉದ್ದೇಶಕ್ಕೆ ಸೇರಿಸಿಲ್ಲ ಎಂದರೆ ಸಾಕ್ಷಿ ಆ ಆಸ್ತಿಗಳು ಇದ್ದಾವೋ ಇಲ್ಲವೋ ನಮ್ಮ ದೊಡ್ಡಣ್ಣನನ್ನು ಕೇಳಬೇಕು ಎಂದು ನುಡಿದಿರುತ್ತಾರೆ. ಒಂದೊಂದು ನಿವೇಶನಕ್ಕೆ ರೂ.20 ಲಕ್ಷ ಆಗಬಹುದಾ ಎಂದರೆ ಸಾಕ್ಷಿ ನಮ್ಮ ದೊಡ್ಡಣ್ಣನಿಗೆ ಗೊತ್ತು ಎಂದು ನುಡಿದಿರುತ್ತಾರೆ.

ಕೊಪ್ಪದಲ್ಲಿ 4 ನೇ ಪ್ರತಿವಾದಿ ವಾಸವಾಗಿರುವ ಮನೆ ರೂ.80 ಲಕ್ಷದಿಂದ ಒಂದು ಕೋಟಿ ಬೆಲೆ ಬಾಳುತ್ತಿರಬಹುದು ಎಂದರೆ ಸಾಕ್ಷಿ ಮಾರುಕಟ್ಟೆ ಮೌಲ್ಯ ಜಾಸ್ತಿ ಇರಬಹುದು ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿ ಇರುವ ಮನೆಯ ಮೌಲ್ಯ ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೇವೆ. ಅಲ್ಲಿ ಇಲ್ಲಿ ತಿಳಿದುಕೊಂಡಿದ್ದೇವೆ ಹಾಗೂ ಮುನ್ಸಿಪಾಲಿಟಿಯಲ್ಲಿ ಕೂಡ ವಿಚಾರಣೆ ಮಾಡಿದ್ದೇವೆ. ದಾವಾ ಹಾಕುವಾಗ ಇರುವ ಮೌಲ್ಯವನ್ನು ನಮ್ಮ ದಾವೆಯಲ್ಲಿ ನಮೂದಿಸಿದ್ದೇವೆ, ಪ್ರತೀ ವರ್ಷ ಮೌಲ್ಯ ಏರುಪೇರು ಆಗುತ್ತಾ ಇರುತ್ತದೆ, ಈಗ ಮೌಲ್ಯ ಎಷ್ಟಿದೆ ಗೊತ್ತಿಲ್ಲ. ಮಾರು ಕಟ್ಟೆ ಬೆಲೆಯ ಬಗ್ಗೆ ಸಬ್-ರಿಜಿಸ್ಟ್ರಾರ್ ಕಚೇರಿಯಿಂದ ಮಾರುಕಟ್ಟೆ ಮೌಲ್ಯ ಸೂಚಿ ತೆಗೆದುಕೊಂಡಿದ್ದೇವೆ. ಸದರಿ ಮಾರುಕಟ್ಟೆ ಮಾರ್ಗ ಸೂಚಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ . ಮಾರುಕಟ್ಟೆ ಮೌಲ್ಯದ ಮೇಲೆ ನ್ಯಾಯಾಲಯದ ಶುಲ್ಕ ಕಟ್ಟಿಲ್ಲ ಎಂದರೆ ಗೊತ್ತಿಲ್ಲ. ಆಸ್ತಿ ಮಾರಾಟಕ್ಕೆ ಇಟ್ಟರೆ ಸುಮಾರು ಒಂದು - ಒಂದೂವರೆ ಕೋಟಿ ಬರಬಹುದಾ ಎಂಬ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಅಸಲು ದಾವಾ ನಂಃ 46/2022
ಪಿ ಡಬ್ಲ್ಯುಃ 1

ನಮ್ಮ ಊರಿನಲ್ಲಿ ಅಡಿಕೆ ತೋಟದ ಮಾರುಕಟ್ಟೆ ಮೌಲ್ಯ ಎಷ್ಟಿದೆ ನನಗೆ ಸರಿಯಾಗಿ ಗೊತ್ತಿಲ್ಲ. ಅಲ್ಲಿ ಕಾಫಿ , ಅಡಿಕೆ ಮತ್ತು ಕಾಳುಮೆಣಸು ಇದೆ ಎಂದರೆ ಸಾಕ್ಷಿ ಕಾಫಿ ತೋಟ ಮಾರಾಟ ಮಾಡಿದ್ದೇವೆ, ಅಡಿಕೆ ತೋಟಕ್ಕೆ ಹಳದಿ ಎಲೆ ರೋಗ ಬಂದಿದೆ ಅದಕ್ಕೆ ಯಾವುದೇ ಆದಾಯ ಇಲ್ಲ ಎಂದು ನುಡಿದಿರುತ್ತಾರೆ. ಹಳದಿ ಎಲೆ ರೋಗ ಬಂದಿದೆ ಎಂದು ತೋರಿಸಲು ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಅವಶ್ಯಕತೆ ಬಿದ್ದರೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇವೆ ಎಂದು ನುಡಿದಿರುತ್ತಾರೆ.

ಪಹಣಿಯನ್ನು ಬರೆಯುವಾಗ ಗ್ರಾಮ ಲೆಕ್ಕಿಗರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡುತ್ತಾರೆ ಹಾಗೂ 2-3 ವರ್ಷಗಳಿಂದ ಇತ್ತೀಚಿನ ದಿನಗಳಲ್ಲಿ ಉಪಗ್ರಹಗಳಿಂದ ಛಾಯಾಚಿತ್ರಗಳನ್ನು ತೆಗೆದು ಬೆಳೆಯನ್ನು ಪಹಣಿಯಲ್ಲಿ ದಾಖಲು ಮಾಡುತ್ತಾರೆ ಎಂದರೆ ಇರಬಹುದು , ಆದರೆ ನಮ್ಮ ತೋಟಕ್ಕೆ ಇದು ಆಗಿದೆಯೋ ಇಲ್ಲವೋ ನಮ್ಮ ಅಣ್ಣನನ್ನು ಕೇಳಬೇಕು. ಯಾವ ಬೆಳೆ ಇರುತ್ತದೆ ಅದನ್ನು ಪಹಣಿಯಲ್ಲಿ ದಾಖಲಿಸುತ್ತಾರೆ ಎಂದರೆ ಸರಿ . ನಿಪಿ 5 ರಲ್ಲಿ ಅಡಿಕೆ , ಕಾಫಿ , ಕಾಳುಮೆಣಸು ಬೆಳೆಯನ್ನು ತೋರಿಸಿದ್ದಾರೆ ಎಂದರೆ ಸಾಕ್ಷಿ ಮೊದಲು ಇತ್ತು ,ಈಗ ಇಲ್ಲ ಎಂದು ನುಡಿದಿರುತ್ತಾರೆ. ಹಳದಿ ಎಲೆ ರೋಗ ಬಂದ ಬಗ್ಗೆ ತಹಶೀಲ್ದಾರರು, ಗ್ರಾಮ ಲೆಕ್ಕಿಗರನ್ನು ಕರೆದುಕೊಂಡು ಹೋಗಿ ನಮ್ಮ ತಂದೆ ಇರುವ ಕಾಲದಿಂದಲೇ ಪರಿಶೀಲನೆ ಮಾಡಿಸಿದ್ದಾರೆ. ನಮ್ಮ ತಂದೆ ತೀರಿಕೊಂಡ ನಂತರ ವಿಭಾಗ ಮಾಡಿಕೊಂಡಾಗ ನಿರ್ಜನ ಪ್ರದೇಶ, ವ್ಯವಸಾಯ ಇಲ್ಲದೇ ಇರುವ ಪ್ರದೇಶ ಎಂದು ಹಿಸ್ಸಾ ಪತ್ರದಲ್ಲಿ ಬರೆದುಕೊಂಡಿಲ್ಲ ಬೆಳೆ ಇಲ್ಲದೇ ಇದ್ದರೆ ರೂಢಿ ಇಲ್ಲದೇ ಇದ್ದರೆ ಅದನ್ನು ಹಿಸ್ಸಾ ಪತ್ರದಲ್ಲಿ ಬರೆದುಕೊಳ್ಳುತ್ತಿದ್ದೆವು ಎಂದರೆ ಸಾಕ್ಷಿ ಇಬ್ಬರನ್ನು ಬಿಟ್ಟು ಉಳಿದವರು ಹೊರಗಡೆ ಇದ್ದರು, ಕಾರಣ ಅದನ್ನು ಬರೆಯುವ ಅವಶ್ಯಕತೆ ಬರಲಿಲ್ಲ ಎಂದು ನುಡಿದಿರುತ್ತಾರೆ. ಬೆಳೆ ಇರಲಿಲ್ಲ ಎಂದು ತಹಶೀಲ್ದಾರರಿಂದ ದೃಢೀಕರಣ ತಂದು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ನಮ್ಮ ಅಣ್ಣನನ್ನು ಕೇಳಬೇಕು ಎಂದು ನುಡಿದಿರುತ್ತಾರೆ. ಬೆಳೆ ಕಾಲಂ ನಲ್ಲಿ ಬೆಳೆ ನಮೂದು ಆಗದೇ ಇದ್ದರೆ ಸೊಸೈಟಿಯಲ್ಲಿ , ಬಾಂಕ್ ಗಳಲ್ಲಿ ಸಾಲವನ್ನು ಕೊಡುವುದಿಲ್ಲ ಎಂದರೆ ಸಾಕ್ಷಿ ಅದೂ ನಮ್ಮ ಅಣ್ಣನಿಗೇ ಗೊತ್ತು ಎಂದು ನುಡಿದಿರುತ್ತಾರೆ. ನಿಪಿ 5 ರ ಕಾಲಂ 11 ರಲ್ಲಿ ನಮೂದಿಸಿದ ಸಾಲವನ್ನು ಪಡೆದ ಬಗ್ಗೆ ನಮ್ಮ ಅಣ್ಣನನ್ನು ಕೇಳಬೇಕು. ಇದುವರೆಗೂ

ಸಾಲ ಮಾಡಿದ ಬಗ್ಗೆ ನಮ್ಮ ಅಣ್ಣನನ್ನು ಕೇಳಿಲ್ಲ. ಅವರೇ ಸಾಲ ತೆಗೆದು ಕಟ್ಟುತ್ತಿದ್ದರು ಎಂದರೆ ಸಾಕ್ಷಿ ಅವರನ್ನೇ ಕೇಳಬೇಕು ಎಂದು ನುಡಿದಿರುತ್ತಾರೆ. ದಾವಾ ಹಾಕುವ ಕಾಲಕ್ಕೆ ಪಹಣಿಯನ್ನು ನೋಡಿ ನಾವು ಸಾಲದ ಬಗ್ಗೆ ನಮ್ಮ ಅಣ್ಣನನ್ನು ವಿಚಾರಿಸಿರುವುದಿಲ್ಲ.

ನಿಪಿ 29 ಮೆಡಿಕಲ್ ಸರ್ಟಿಫಿಕೇಟ್ ನಲ್ಲಿ ತೋರಿಸಿದ ಡಾ.ಪಿ ದತ್ತಾತ್ರೇಯ ನಮ್ಮ ಸಂಬಂಧಿಕರಲ್ಲ. ಸದರಿ ವೈದ್ಯರು 2000 ನೇ ಇಸವಿಯಲ್ಲಿ ಅವರ ನೆನಪಿನ ಶಕ್ತಿಯ ಬಗ್ಗೆ ಒಂದು ಸರ್ಟಿಫಿಕೇಟನ್ನು ಕೊಡತ್ತಾರೆ, ಅದು ಯಾವ ದಿನ ನಮ್ಮ ತಾಯಿಯನ್ನು ಕರೆದುಕೊಂಡು ಹೋಗಿದ್ದರು, ನೆನಪಿಲ್ಲ. ಸರ್ಟಿಫಿಕೇಟ್ ನೀಡಿರುವ ವೈದ್ಯರು ಅವರ ಬಳಿ ಇರುವ ದಾಖಲಾತಿಯನ್ನು ಪರಿಶೀಲಿಸಿ ಸರ್ಟಿಫಿಕೇಟ್ ನೀಡಿದ್ದೇನೆ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಅದು ನನ್ನ ತಮ್ಮನಿಗೆ ಗೊತ್ತು ಎಂದು ನುಡಿದಿರುತ್ತಾರೆ. ನನ್ನ ತಮ್ಮ ಮೋಹನ್ ಸದರಿ ಸರ್ಟಿಫಿಕೇಟ್ ತೆಗೆದುಕೊಂಡು ಬಂದಿರುತ್ತಾರೆ. ಸದರಿ ಸರ್ಟಿಫಿಕೇಟ್ ಮೋಹನ್ ರವರ ಕೋರಿಕೆಯ ಮೇರೆಗೆ ಕೊಟ್ಟಿದೆ ಎಂದರೆ ಸಾಕ್ಷಿ ಸುಮ್ಮನೆ ನಿಂತಿರುತ್ತಾರೆ. ಸದರಿ ಸರ್ಟಿಫಿಕೇಟ್‌ನ್ನು ದಾವೆ ಹಾಕಿದ ನಂತರ ತೆಗೆದುಕೊಂಡು ಬಂದು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿ ಪರಿಶೀಲಿಸಿ ನೋಡಬೇಕು ಎಂದು ನುಡಿದಿರುತ್ತಾರೆ. ಸದರಿ ಡಾಕ್ಟರ್ ಸರ್ಟಿಫಿಕೇಟ್ ತರುವಾಗ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎಂದು ಹೇಳಿ ತಂದಿರುವ ದಾಖಲಾತಿ ಅಲ್ಲ, ನಮ್ಮ ಬಳಿ ಇತ್ತು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ.

ಮಂಗಳೂರು ಹಿಯರಿಂಗ್ ಸೆಂಟರ್ ಇದು ನೋಂದಾಯಿತ / ನೊಂದಾಯಿತವಲ್ಲದ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದಿರುವುದಾ ಗೊತ್ತಿಲ್ಲ. ನಿಪಿ ಸ 29 ಡಾಕ್ಟರ್ ಲೆಟರ್ ಹೆಡ್ ನಲ್ಲಿ ಇಲ್ಲ ಎಂದರೆ ಗೊತ್ತಿಲ್ಲ. ಡಾ. ದತ್ತಾತ್ರೇಯ ಅವರು ಮೆಡಿಕಲ್ ಪ್ರಾಕ್ಟೀಶನರ್ ಅಲ್ಲ, ಒಂದು ವೇಳೆ ಅವರು ಮೆಡಿಕಲ್ ಪ್ರಾಕ್ಟೀಶನರ್ ಆಗಿದ್ದರೆ ಅವರು ಸ್ವಂತ ಲೆಟರ್ ಹೆಡ್ ನಲ್ಲಿ ಸರ್ಟಿಫಿಕೇಟ್ ಕೊಡುತ್ತಿದ್ದರು ಎಂದರೆ ಸಾಕ್ಷಿ ಅವರು ಡಾಕ್ಟರೇ ಎಂದು ಉತ್ತರಿಸಿರುತ್ತಾರೆ. ಅವರು ಡಾಕ್ಟರ್ ಆಗಿದ್ದರೆ ಅವರು ಮೆಡಿಕಲ್ ರಿಪೋರ್ಟನ್ನು ಆಧರಿಸಿ ಈ ಸರ್ಟಿಫಿಕೇಟನ್ನು ಬರೆಯಲಾಗಿದೆ ಎಂದು ಬರೆಯುತ್ತಿದ್ದರು ಎಂದರೆ ಸಾಕ್ಷಿ ನಾವು ಚೆಕಪ್ ಮಾಡಿಸಿದ್ದೇವೆ, ಅವರು ಆ ಸರ್ಟಿಫಿಕೇಟ್ ಕೊಟ್ಟಿದ್ದಾರೆ, ಅಷ್ಟೇ ಗೊತ್ತು ಎಂದು ನುಡಿದಿರುತ್ತಾರೆ. ನಿಪಿ 29 ರ ಸರ್ಟಿಫಿಕೇಟ್ ಈ ಕೇಸಿಗೋಸ್ಕರ ಸೃಷ್ಠಿ ಮಾಡಿದ ದಾಖಲಾತಿ

ಎಂದರೆ ಸರಿಯಲ್ಲ. ಸದರಿ ಸರ್ಟಿಫಿಕೇಟನ್ನು ಯಾರಿಗೆ ನೀಡಿದ್ದಾರೆ ಎಂದು ಬರೆದಿಲ್ಲ ಎಂದರೆ ಸಾಕ್ಷಿ ನಾವು ಚೆಕಪ್ ಮಾಡಿಸಿದ್ದೇವೆ, ಸರ್ಟಿಫಿಕೇಟ್ ಕೊಟ್ಟಿದ್ದಾರೆ ಅಷ್ಟೇ ಎಂದು ನುಡಿದಿರುತ್ತಾರೆ. ನಾವು ಯಾವತ್ತೂ ತಾಯಿಯನ್ನು ಮಂಗಳೂರಿಗೆ ಕರೆದುಕೊಂಡು ಹೋಗಿಲ್ಲ , ಯಾವುದೇ ಚಿಕಿತ್ಸೆ ಕೊಡಿಸಿಲ್ಲ ಎಂದರೆ ಸರಿಯಲ್ಲ. ಮೆಡಿಕಲ್ ಸರ್ಟಿಫಿಕೇಟ್ ನ ಖರ್ಚುಗಳನ್ನು ಅರವಿಂದರವರೇ ಮಾಡಿರುತ್ತಾರೆ. ಯಾವ ವರ್ಷದಲ್ಲಿ ಕರೆದುಕೊಂಡು ಹೋಗಿದ್ದರು, ಗೊತ್ತಿಲ್ಲ . ಸದರಿ ವೈದ್ಯರು ಇನ್ನೂ ಪ್ರಾಕ್ಟೀಸ್ ಮಾಡುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ.

ನಿಪಿ 30 ರ ಡಾ. ಗಣೇಶ ನಾಯಕ್ ರವರು ನೀಡಿದ ಸರ್ಟಿಫಿಕೇಟನ್ನು ದಾವೆ ಹಾಕಿದ ನಂತರ ನಾನು ಸಾಕ್ಷಿ ನುಡಿಯುವ ಮುಂಚೆ ದಿನಾಂಕಃ13.04.2023 ರಂದು ತೆಗೆದುಕೊಂಡಿರುವ ದಾಖಲಾತಿ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ, ನನ್ನ ಸಹೋದರ ವೆಂಕಟೇಶನನ್ನು ಕೇಳಬೇಕು, ಆತ ತೀರ್ಥಹಳ್ಳಿಯಲ್ಲಿ ಇರುತ್ತಿದ್ಧ ಆತನೇ ಚಿಕಿತ್ಸೆ ಕೊಡಿಸಿದ್ದಾರೆ ಎಂದು ನುಡಿದಿರುತ್ತಾರೆ. ಸರ್ಟಿಫಿಕೇಟ್ ನಲ್ಲಿ ವೈದ್ಯರು ಯಾರಿಗೆ ಚಿಕಿತ್ಸೆ ನೀಡಿದ್ದಾರೆ ಪೇಷೆಂಟ್ ಹೆಸರು ಬರೆಯುತ್ತಾರೆ ಎಂದರೆ ಸಾಕ್ಷಿ ಒಬ್ಬೊಬ್ಬರು ಬರೆಯುತ್ತಾರೆ , ಒಬ್ಬೊಬ್ಬರು ಬರೆಯುವುದಿಲ್ಲ ಎಂದು ನುಡಿದಿರುತ್ತಾರೆ .ಯಾವ ದಿನ ಚಿಕಿತ್ಸೆ ಕೊಡುತ್ತಾರೆ ಅದೇ ದಿನ ಮೆಡಿಕಲ್ ಸರ್ಟಿಫಿಕೇಟ್ ಕೊಡುತ್ತಾರೆ ಎಂದರೆ ಗೊತ್ತಿಲ್ಲ. ದಿನಾನಂಕಃ13.04.2023 ಕ್ಕೆ ನಮ್ಮ ತಾಯಿ ಬದುಕಿರಲಿಲ್ಲ ಎಂದರೆ ಸರಿ . ನಿಪಿ 30 ರಲ್ಲಿ ನನ್ನ ತಾಯಿಯ ಹೆಸರು ಶಕುಂತಲಮ್ಮ ಎಂದು ವೈದ್ಯರು ಬರೆದಿದ್ದಾರೆ ಎಂದರೆ ಸರಿ. ನಿಪಿ 30 ರ ದಾಖಲಾತಿ ಈ ಕೇಸಿಗೋಸ್ಕರ ಸೃಷ್ಠಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಾಯಿ ಅಲ್ಲಿ ಸುಮಾರು ಬಾರಿ ಚಿಕಿತ್ಸೆ ತೆಗೆದುಕೊಂಡಿದ್ದರು ಎಂದು ನುಡಿದಿರುತ್ತಾರೆ. ನಿಪಿ 27 ರಿಂದ ನಿಪಿ 30 ರ ಮೆಡಿಕಲ್ ದಾಖಲಾತಿಗಳು ಈ ಕೇಸಿಗೋಸ್ಕರ ಸೃಷ್ಠಿ ಮಾಡಿದ ದಾಖಲಾತಿಗಳು ಎಂದರೆ ಸರಿಯಲ್ಲ.

ಅಸಲು ದಾವಾ ನಂಃ 46/2022
ಪಿ ಡಬ್ಲ್ಯುಃ 1

(ಮುಂದುವರಿದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ